# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ಕ್ರ.ಸಂ: ಬೆವಿಕಂ/ಬಿಸಿ–47/2015-16/CYS–೨೭
ಲಗತ್ತು:

ನಿಗಮ ಕಾರ್ಯಾಲಯ
ಬೆವಿಕಂ, ಕೆ.ಆರ್. ವೃತ್ತ
ಬೆಂಗಳೂರು – 560 001
ದಿನಾಂಕ: ೨೯-೧೨-೨೦೧೫

## ಸುತ್ತೋಲೆ

**ವಿಷಯ:** ಬೀದಿ ದೀಪಗಳಿಗೆ ವಿದ್ಯುನ್ಮಾನ ನಿಯಂತ್ರಕಗಳನ್ನು ಅಳವಡಿಸುವ ಬಗ್ಗೆ.

**ಪ್ರಸ್ತಾವನೆ:-**

ಅನಗತ್ಯ ಸಮಯದಲ್ಲಿ ಬೀದಿ ದೀಪಗಳ ಬಳಕೆಯಿಂದ, ವಿದ್ಯುತ್ ಪೋಲಾಗುತ್ತಿರುವುದನ್ನು ತಪ್ಪಿಸಿ, ಅತ್ಯಮೂಲ್ಯವಾದ ವಿದ್ಯುತನ್ನು ಸಂರಕ್ಷಿಸುವ ಹಾಗು ಬೀದಿ ದೀಪ ನಿರ್ವಹಣೆಯನ್ನು ಸರಳೀಕೃತಗೊಳಿಸುವ ಸಲುವಾಗಿ ಬೀದಿ ದೀಪಗಳಿಗೆ ವಿದ್ಯುನ್ಮಾನ ನಿಯಂತ್ರಕಗಳನ್ನು ಅಳವಡಿಸುವ ಕಾರ್ಯವನ್ನು ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆ/ ಗ್ರಾಮ ಪಂಚಾಯತಿಗಳು ಕೈಗೊಳ್ಳುವ ಬಗ್ಗೆ.

ಈ ಹಿನ್ನೆಲೆಯಲ್ಲಿ ಕೆಳಕಂಡ ಸುತ್ತೋಲೆಯನ್ನು ಹೊರಡಿಸಲಾಗಿದೆ:

ಕ್ರ.ಸಂ: ಬೆವಿಕಂ/ಬಿ.ಸಿ–47/2015-16/CYS-೨೭ ದಿನಾಂಕ: ೨೯-೧೨-೨೦೧೫

ಯಾವುದೇ ನಗರ ಸ್ಥಳೀಯ ಸಂಸ್ಥೆ/ ಗ್ರಾಮ ಪಂಚಾಯತಿ/ ಇತರೆ ಸಂಘ ಸಂಸ್ಥೆಗಳು ಬೆವಿಕಂ ನ ವಿದ್ಯುತ್ ಕಂಬಗಳಿಗೆ, ಪ್ರಮಾಣಿತ ಗುಣಮಟ್ಟದ ಬೀದಿ ದೀಪಗಳ ನಿಯಂತ್ರಕಗಳನ್ನು ಅಳವಡಿಸುವ ಕಾರ್ಯವನ್ನು ಕೈಗೊಳ್ಳಲು, ಬೆವಿಕಂ ವತಿಯಿಂದ ಯಾವುದೇ ರೀತಿಯ ಆಕ್ಷೇಪಣೆಯಿರುವುದಿಲ್ಲ.

ಬೆವಿಕಂ ನ ಎಲ್ಲಾ ಅಧಿಕಾರಿಗಳು, ನಗರ ಸ್ಥಳೀಯ ಸಂಸ್ಥೆ/ ಗ್ರಾಮ ಪಂಚಾಯಿತಿ/ ಇತರೆ ಸಂಘ ಸಂಸ್ಥೆ/ ಇಲಾಖೆಯವರು ತಾವಾಗಿಯೇ ಕೈಗೊಳ್ಳುವ ಪ್ರಮಾಣಿತ ಗುಣಮಟ್ಟದ ಬೀದಿ ದೀಪ ನಿಯಂತ್ರಕಗಳ ಅಳವಡಿಕೆಯ ಅನುಷ್ಠಾನಕ್ಕೆ ಸಹಕರಿಸಬೇಕಾಗಿ ಸೂಚಿಸಲಾಗಿದೆ. ಅಲ್ಲದೆ ಈ ಯೋಜನೆಯ ಕಾರ್ಯಾಚರಣೆಯ ಸಂದರ್ಭದಲ್ಲಿ, ಸಂಬಂಧ ಪಟ್ಟ ಬೆವಿಕಂ ನ ಅಧಿಕಾರಿಗಳು ನಿಯಮಾನುಸಾರ ಸೂಕ್ತ ಸುರಕ್ಷತಾ ಕ್ರಮಗಳನ್ನು ಅನುಸರಿಸಿ ಬೀದಿ ದೀಪ ನಿಯಂತ್ರಕಗಳ ಅಳವಡಿಕೆಗೆ ಸಂಪೂರ್ಣ ಸಹಕಾರ ಹಾಗು ಬೆಂಬಲವನ್ನು ನೀಡಿ ಅತ್ಯಮೂಲ್ಯವಾದ ವಿದ್ಯುತ್‌ನ ಸಂರಕ್ಷಣೆ ಹಾಗು ಸರಳೀಕೃತ ಬೀದಿ ದೀಪ ನಿರ್ವಹಣೆಗೆ ಸಕಾರಾತ್ಮಕವಾಗಿ ಸ್ಪಂದಿಸಬೇಕಾಗಿ ಈ ಮೂಲಕ ತಿಳಿಸಿದೆ.

ಆದೇಶದ ಮೇರೆಗೆ

Jayanthi

(ಎನ್. ಜಯಂತಿ)
ಪ್ರಧಾನ ವ್ಯವಸ್ಥಾಪಕರು (ಗ್ರಾ.ಸಂ)
ಬೆ.ವಿ.ಕಂ. ಬೆಂಗಳೂರು

ಪ್ರತಿಗಳು :

1. ಮುಖ್ಯ ಪ್ರಧಾನ ವ್ಯವಸ್ಥಾಪಕರು (ನಿ.ವ್ಯ/ಕಾರ್ಯಾಚರಣೆ/ಹ ಮತ್ತು ವಾ), ನಿಗಮ ಕಾರ್ಯಾಲಯ, ಬೆ.ವಿಕಂ, ಬೆಂಗಳೂರು.
2. ಎಲ್ಲಾ ಮುಖ್ಯ ಇಂಜಿನಿಯರ್ (ವಿ), ವಾ.ಕಾ ಮತ್ತು ಪಾ, ಬೆ.ವಿಕಂ, ಬೆಂಗಳೂರು
3. ಎಲ್ಲಾ ಪ್ರಧಾನ ವ್ಯವಸ್ಥಾಪಕರು, ನಿಗಮ ಕಾರ್ಯಾಲಯ, ಬೆ.ವಿ.ಕಂ, ಬೆಂಗಳೂರು
4. ಎಲ್ಲಾ ಅಧೀಕ್ಷಕ ಇಂಜಿನಿಯರ್‌ಗಳು (ವಿ), ವಾ.ಕಾ ಮತ್ತು ಪಾ, ಬೆ.ವಿ.ಕಂ,
5. ಪೋಲೀಸ್ ಅಧೀಕ್ಷಕರು, ಜಾಗೃತದಳ, ಬೆವಿಕಂ, ಬೆಂಗಳೂರು
6. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್‌ಗಳು (ವಿ), ವಾ.ಕಾ ಮತ್ತು ಪಾ, ಬೆ.ವಿಕಂ
7. ಎಲ್ಲಾ ಸಹಾಯಕ ನಿರ್ವಾಹಕ ಇಂಜಿನಿಯರ್‌ಗಳು (ವಿ), ವಾ.ಕಾ ಮತ್ತು ಪಾ, ಬೆ.ವಿಕಂ
8. ವ್ಯವಸ್ಥಾಪಕ ನಿರ್ದೇಶಕರು / ನಿರ್ದೇಶಕರು (ತಾಂತ್ರಿಕ / ನಿರ್ದೇಶಕರು (ಹಣಕಾಸು), ನಿಗಮ ಕಾರ್ಯಾಲಯ ಬೆವಿಕಂ ರವರ ಆಪ್ತ ಕಾರ್ಯದರ್ಶಿ,{ದಯವಿಟ್ಟು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು /ನಿರ್ದೇಶಕರು (ತಾಂತ್ರಿಕ) /ನಿರ್ದೇಶಕರು (ಹಣಕಾಸು) ರವರಿಗೆ ಮಂಡಿಸಬೇಕೆಂದು ಕೋರಲಾಗಿದೆ}
9. ಎಲ್ಲಾ ಶಾಖಾಧಿಕಾರಿಗಳು, ಬೆ.ವಿ.ಕಂ.
10. ಕಛೇರಿ ಪ್ರತಿ / ಮುಖ್ಯ ಕಡತ.